**RA: 24/2021**
**R.W-1**

**<u>ಹಿರಿಯ ಶ್ರೇಣಿಯ ಸಿವಿಲ್ ನ್ಯಾಯಾಧೀಶರು ಮತ್ತು ಜೆ.ಎಂ.ಎಫ್.ಸಿ ಕೂಡ್ಲಿಗಿ</u>**

ದಿನಾಂಕಃ 31.10.2025 ರಂದು ಸಾಕ್ಷಿದಾರರಿಗೆ, ಸತ್ಯ ಪ್ರತಿಜ್ಞೆ ಬೋಧಿಸಲಾಯಿತು.

**<u>ಪಾಟೀ ಸವಾಲು ಅರ್ಜಿದಾರರ ಪರ ವಕೀಲರಿಂದ</u>**

ಸರ್ವೆ ನಂಃ 769 ಎ/1 ರ ವಿಸ್ತೀರ್ಣ 3.63 ಎಕರೆ ಇದೆ. ಓ.ಎಸ್ ನಂಃ 107/2002 ನ್ನು ಎಷ್ಟು ಆಸ್ತಿಗಳಿಗೆ ಸಂಬಂಧಿಸಿದಂತೆ ಸಲ್ಲಿಸಲಾಗಿತ್ತು ಎಂದು ನನಗೆ ಗೊತ್ತಿಲ್ಲ. ಸದರಿ ಆಸ್ತಿಯು ನನ್ನ ತಾತನ ಹೆಸರಿನಲ್ಲಿ ಇತ್ತು. ಸದರಿ ಆಸ್ತಿಯು ತೂಲಹಳ್ಳಿ ಶೇಕ್ ಸಾಬ್, ಹುಸೇನ್ ಮಿಯಾಸಾಬ್, ಸಣ್ಣ ಕನಕಪ್ಪ, ಬಸಪ್ಪ ಮತ್ತು ಲಕ್ಷ್ಮಮ್ಮ ರವರ ಹೆಸರಿನಲ್ಲಿ ಇತ್ತು ಎಂದರೆ ನನಗೆ ಗೊತ್ತಿಲ್ಲ. ಈ ಬಗ್ಗೆ ವಾದಿಗಳು ಸದರಿ ಆಸ್ತಿಯ ಪಹಣಿ ನ್ಯಾಯಾಲಯಕ್ಕೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ನಾವು ಸದರಿ ಆಸ್ತಿಯ ಪಹಣಿಯನ್ನು ಸಲ್ಲಿಸಿರುವುದಿಲ್ಲ. ತೂಲಹಳ್ಳಿ ಶೇಕ್ ಸಾಬ್ ರವರಿಗೂ ನಮ್ಮ ಕುಟುಂಬಕ್ಕೂ ಸಂಬಂಧ ಇಲ್ಲ. ಈ ಮೇಲ್ಮನವಿಯ ಮೇಲ್ಮನವಿದಾರರು ತೂಲಹಳ್ಳಿ ಶೇಕ್ ಸಾಬ್ ರವರ ವಂಶಸ್ಥರು ಎಂದರೆ ನನಗೆ ಗೊತ್ತಿಲ್ಲ. ಸದರಿ ಆಸ್ತಿಯಲ್ಲಿ ಹುಸೇನ್ ಮಿಯಾಸಾಬ್ ರವರಿಗೆ ಕೇವಲ 25 ಸೆಂಟ್ಸ್ ಆಸ್ತಿ ಮಾತ್ರ ಇತ್ತು ಎಂದರೆ ಸರಿಯಲ್ಲ. ಅವರ ಹೆಸರಿಗೆ 3.38 ಎಕರೆ ಆಸ್ತಿ ಇತ್ತು. ಸದರಿಯವರಿಗೆ 3.38 ಎಕರೆ ಇತ್ತು ಎಂಬುದಕ್ಕೆ ಸಂಬಂಧಿಸಿದಂತೆ ವಾದಿಗಳು ದಾಖಲೆ ಸಲ್ಲಿಸಿದ ಬಗ್ಗೆ ನನಗೆ ಗೊತ್ತಿಲ್ಲ. ಆದರೆ ನಾವು ದಾಖಲೆಗಳನ್ನು ಸಲ್ಲಿಸಿರುವುದಿಲ್ಲ. ಸದರಿ ಆಸ್ತಿಯಲ್ಲಿ ತೂಲಹಳ್ಳಿ ಶೇಕ್ ಸಾಬ್ ರವರು 1 ಎಕರೆ ಜಾಗದಲ್ಲಿ ಕಣ ಕಟ್ಟಿಕೊಂಡು ಉಳಿದ 1 ಎಕರೆಯಲ್ಲಿ ಸಾಗುವಳಿ ಮಾಡುತ್ತಿದ್ದಾರೆ ಎಂದರೆ ಸರಿಯಲ್ಲ. ಸದರಿ ಆಸ್ತಿಯಲ್ಲಿ ಬಹಳ ಜನರ ಮನೆಗಳು, ಕಣಗಳು ಇವೆ ಎಂದರೆ ಸಾಕ್ಷಿಯು ಮನೆಗಳು ಇಲ್ಲ ಆದರೆ ಹುಸೇನ್ ಮಿಯಾಸಾಬ್ ರವರ ಒಂದು ಕಣ ಮತ್ತು ವ್ಯವಸಾಯದ ಜಮೀನು ಇದೆ ಎಂದು ನುಡಿಯುತ್ತಾರೆ. ಸದರಿ ಸರ್ವೆ ನಂಬರ್ ಜಮೀನಿನಲ್ಲಿ ತೂಲಹಳ್ಳಿ ಶೇಕ್ ಸಾಬ್ ರವರ ವಾರಸುದಾರರ ಹೆಸರಿನಲ್ಲಿ ಇವತ್ತಿಗೂ ಖಾತೆ ಇದೆ ಎಂದರೆ ನನಗೆ ಗೊತ್ತಿಲ್ಲ. ಸದರಿ ಜಮೀನಿಗೆ ಸಂಬಂಧಿಸಿದಂತೆ ದಾಖಲೆಗಳನ್ನು ಪರಿಶೀಲನೆ ಮಾಡದೆ ವಾದಿ ಮತ್ತು ನಾವು ದಾವೆಯನ್ನು ನಡೆಸಿದ್ದೇವೆ ಎಂದರೆ ಸರಿಯಲ್ಲ. ದಾವೆ ಸಲ್ಲಿಸಿದವರಿಗೆ ಆ ಬಗ್ಗೆ ಗೊತ್ತಿರುತ್ತದೆ.

ನಾವು ಮತ್ತು ವಾದಿಗಳು ಶಾಮೀಲಾಗಿ ತೂಲಹಳ್ಳಿ ಶೇಕ್ ಸಾಬ್ ರವರನ್ನು ಆ ದಾವೆಯಲ್ಲಿ ಪಕ್ಷಗಾರರನ್ನಾಗಿ ಮಾಡದೆ ನ್ಯಾಯಾಲಯದಲ್ಲಿ ಡಿಕ್ರಿ ಪಡೆದಿದ್ದೇವೆ ಎಂದರೆ ಸರಿಯಲ್ಲ. ಸದರಿ ಡಿಕ್ರಿಯ ಮೇಲೆ ವಾದಿಗಳು ಎಫ್.ಡಿ.ಪಿ ನಂಃ 05/2012 ರನ್ನು ಸಲ್ಲಿಸಿದ್ದು ಅದರಲ್ಲಿ

ನ್ಯಾಯಾಲಯದ ಕಮಿಷನರ್ ರವರು ದಿಃ 16.09.2021 ರಂದು ಸ್ಥಳಕ್ಕೆ ಅಳತೆಗಾಗಿ ಹೋದಾಗ ಈ ಮೇಲ್ಮನವಿದಾರರು ಅಡ್ಡಿಪಡಿಸಿದ್ದರು ಎಂದರೆ ಸರಿ. ಹಾಗಾಗಿ ಸರ್ವೇಯವರು ಸದರಿ ಸರ್ವೆ ನಂಬರ್ ನಲ್ಲಿ ಯಾವುದೇ ಅಳತೆ ಮಾಡಿಲ್ಲ ಎಂದರೆ ಸರಿ. ಸದರಿ ದಾವೆಯ ವಿದ್ಯಾಮಾನದ ಬಗ್ಗೆ ಈ ಮೇಲ್ಮನವಿದಾರರಿಗೆ ಗೊತ್ತಿತ್ತು. ಸರ್ವೇಯವರು ಸದರಿ ಆಸ್ತಿಯ ಅಳತೆ ಮಾಡಲು ಬಂದಾಗ ಈ ಮೇಲ್ಮನವಿದಾರರಿಗೆ ಓ.ಎಸ್ ನಂಃ 107/2002 ರಲ್ಲಿ ಸದರಿ ಸರ್ವೆ ನಂಬರ್ ಗೆ ಸಂಬಂಧಿಸಿದಂತೆ ಡಿಕ್ರಿ ಆಗಿರುವ ವಿಚಾರ ಗೊತ್ತಾಗಿದ್ದು ದಾಖಲೆಯನ್ನು ತೆಗೆಸಿ ನೋಡಿದಾಗ ಅವರ ಗಮನಕ್ಕೆ ಬಂದಿರುತ್ತದೆ ಎಂದರೆ ಸರಿಯಲ್ಲ. ಸರ್ವೆಯವರು ಬರುವವರಿಗೆ ಸದರಿ ದಾವೆಯಲ್ಲಿ ಡಿಕ್ರಿ ಆದ ವಿಚಾರ ಮೇಲ್ಮನವಿದಾರರಿಗೆ ಗೊತ್ತಿರಲಿಲ್ಲ ಎಂದರೆ ಸರಿಯಲ್ಲ. ಸುಳ್ಳು ಮಾಹಿತಿ ನೀಡಿ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆ ಎಂದರೆ ಸರಿಯಲ್ಲ.

ಮರು ವಿಚಾರಣೆ- ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಲಾಗಿದೆ).

**ಓ,ಹೇ,ಕೇ,ಸರಿ ಇದೆ.**

**ಹಿ.ಸಿ.ಜೆ ಮತ್ತು ಜೆ.ಎಂ.ಎಫ್.ಸಿ**
**ಕೂಡ್ಲಿಗಿ.**